ಮಾಡತಕ್ಕ ಉದ್ದೇಶ ಆಸ್ತಿ ಏನಾದರೂ ಕಾಲವಾದರೆ ಅದಕ್ಕೆ ಹಣ ಕೊಡಬೇಕು ಎಂದು. ಆದರೆ ಇಲ್ಲಿ ವಿಮೆಗಾಗಿ ತೊಡಗಿಸಿರುವ ಹಣ ೮,೧೦,೭೩೮ ಪರಿಹಾರ ಕೊಟ್ಟಿರುವುದು ೮೨, ೪೩೦ ಎಂದು ಹೇಳಿದರೆ ಏನರ್ಥ ? ದಯವಿಟ್ಟು ಸರಿಯಾಗಿ ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಇದಕ್ಕೆ ಒಂದು ನಾರ್ಮ್ಸ್ ಹಾಕಿದ್ದಾರೆ. ಅದರ ಪ್ರಕಾರ ಕೊಟ್ಟಿದ್ದಾರೆ. ವಿಮೆಗಾಗಿ ಕೊಡತಕ್ಕ ಹಣಕ್ಕೆ ಕೆಲವು ನಾರ್ಮ್ಸ್ ಇದೆ. ಅದರ ಪ್ರಕಾರ ವಿವರಗಳನ್ನು ಕೊಟ್ಟಿದ್ದೇವೆ. ಮೈಸೂರು ಜಿಲ್ಲೆಯಲ್ಲಿ ಎಷ್ಟು, ಬೇರೆ ತಾಲ್ಲೂಕುಗಳಿಗೆ ಎಷ್ಟು, ಎಂದು ಕೊಟ್ಟಿದ್ದೇವೆ. ಎಲ್ಲಿ ತೊಂದರೆಯಾಗಿದೆ ಎಂಬ ಬಗ್ಗೆ ನೇರವಾಗಿ ಉಪಪ್ರಶ್ನೆಯನ್ನು ಕೇಳಿದರೆ ನಾನು ಉತ್ತರ ಹೇಳುತ್ತೇನೆ.

ಶ್ರೀ ಜಿ. ರಾಜಗೌಡ.—ಮೈಸೂರು ಪ್ರಾಪರ್‌ನಲ್ಲಿ ವಿಮೆಗೆ ತೊಡಗಿಸಿರತಕ್ಕ ಹಣ ೬೯೦೫೨ ರೂಪಾಯಿಗಳು. ಆದರೆ ಆಸ್ತಿಯ ಮೌಲ್ಯ ಎಷ್ಟು ಎಂಬುದನ್ನು ದಯವಿಟ್ಟು ಹೇಳಿ. ಪರಿಹಾರ ಕೊಡಬೇಕಾದ ಮೊಬಲಗು ಎಷ್ಟು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಜಮೀನು, ಗಾಡಿ, ಕಾರು, ಎತ್ತು, ಹಸು, ಕರೆಯುವ ಎಮ್ಮೆ, ಸೈಕಲ್‌ಗಳು, ಮೈಕ್‌ಸೆಟ್‌ಗಳು, ಚಿಲ್ಲರೆ ಅಂಗಡಿಗಳು ಇವುಗಳಿಗೆ ಕೊಟ್ಟಿದ್ದೇವೆ.

ಶ್ರೀ ಜಿ. ರಾಜಗೌಡ.—ಮೈಸೂರು ತಾಲ್ಲೂಕಿನಲ್ಲಿ ವಿಮೆಗಾಗಿ ತೊಡಗಿಸಿರತಕ್ಕ ಹಣ ೬೯೦೫೨ ರೂಪಾಯಿಗಳು. ಆದರೆ ವಿತರಣೆ ಮಾಡತಕ್ಕ ಆಸ್ತಿಯ ಮೌಲ್ಯ ಎಷ್ಟು ? ಪರಿಹಾರ ಕೊಟ್ಟಿರತಕ್ಕದ್ದು ಎಷ್ಟು ? ಎಷ್ಟು ಮೌಲ್ಯದ ಸ್ವತ್ತನ್ನು ವಿತರಣೆ ಮಾಡಿ ೬೯೦೫೨ ರೂಪಾಯಿ ಹಣವನ್ನು ವಿಮೆಗಾಗಿ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಮೈಸೂರು ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಪ್ರತಿಯೊಬ್ಬ ಜೀತ ವಿಮುಕ್ತನಿಗೂ ೬೨೫೦ ಮೌಲ್ಯದ ಸ್ವತ್ತನ್ನು ಕೊಟ್ಟಿದೆ. ಅದರ ಪ್ರಕಾರ ಒಟ್ಟು ಮೊತ್ತ ಕೊಟ್ಟಿದ್ದೇವೆ.

ಶ್ರೀ ಜಿ. ರಾಜಗೌಡ.—ಉತ್ತರ ಸಮರ್ಪಕವಾಗಿಲ್ಲ.

ಅಧ್ಯಕ್ಷರು.—ಮುಗಿಯಿತಲ್ಲಾ. ಇನ್ನೊಂದು ನಿಮ್ಮ ಪ್ರಶ್ನೆ ಇದೆ. ಇದಕ್ಕೆ ಮಂತ್ರಿಗಳು ಸಮಯ ಕೇಳಿದ್ದಾರೆ. ಶ್ರೀ ಇದ್ದಿನಬ್ಬನವರ ಪ್ರಶ್ನೆಗೂ ಸಮಯ ಕೇಳಿದ್ದಾರೆ.

ಮೈಸೂರಿನ ನಗರಾಭಿವೃದ್ಧಿ ಮಂಡಳಿಯು ಸಾರ್ವಜನಿಕ ಸಂಸ್ಥೆಗಳಿಗೆ ಕೊಟ್ಟಿರುವ ನಿವೇಶನಗಳ ಬಗ್ಗೆ.

೧೬೨೮. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಮೈಸೂರಿನ ನಗರಾಭಿವೃದ್ಧಿ ಮಂಡಳಿಯು ಸಾರ್ವಜನಿಕ ಸಂಸ್ಥೆಗಳಿಗೆ ಕೊಟ್ಟಿರುವ ನಿವೇಶನಗಳೆಷ್ಟು ?

ಆ) ಆ ಪೈಕಿ ಖರೀದಿಗೆ ಕೊಟ್ಟಿರುವ ಸಂಸ್ಥೆಗಳಾವುವು, ಗುತ್ತಿಗೆ ಮೇಲೆ ಕೊಡಲಾಗಿರುವ ಸಂಸ್ಥೆಗಳಾವುವು ?

ಇ) ಗುತ್ತಿಗೆ ಆಧಾರದ ಮೇಲೆ ಇದುವರೆವಿಗೂ ಕಟ್ಟಡ ಕಟ್ಟಿಸಿರುವ ಸಂಸ್ಥೆಗಳಾವುವು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯು ೫೬ ಸಾರ್ವಜನಿಕ ಸಂಸ್ಥೆಗಳಿಗೆ ನಿವೇಶನ ಜಮೀನನ್ನು ಮಂಜೂರು ಮಾಡಿರುತ್ತದೆ.

ಆ) ೪೫ ಸಂಸ್ಥೆಗಳು ಕ್ರಯ ಆಧಾರದ ಮೇಲೆ ಮತ್ತು ೧೦ ಸಂಸ್ಥೆಗಳು ಗುತ್ತಿಗೆ ಆಧಾರದ ಮೇಲೆ ಪಡೆದು ಕೊಂಡಿರುತ್ತವೆ.

ಇ) ಗುತ್ತಿಗೆ ಆಧಾರದ ಮೇಲೆ ನಿವೇಶನ ಜಮೀನನ್ನು ಪಡೆದುಕೊಂಡಿರುವ ೧೦ ಸಂಸ್ಥೆಗಳ ಪೈಕಿ ೩ ಸಂಸ್ಥೆಗಳು ಕಟ್ಟಡ ಕಟ್ಟಲು ಪ್ರಾರಂಭಿಸಿದ್ದು ಕಟ್ಟಡ ಕೆಲಸಗಳು ಮುಂದುವರಿಯುತ್ತಿವೆ.

ಶ್ರೀ ವೇದಾಂತ ಹೆಬ್ಬಿಗೆ,— ಮಾನ್ಯ ಅಧ್ಯಕ್ಷರೆ, ೪೫ ಸಂಸ್ಥೆಗಳಿಗೆ ಪೂರ್ಣ ಕ್ರಯದ ಆಧಾರದ ಮೇಲೆ ಕೊಟ್ಟಿದ್ದಾರೆ. ೧೦ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ಕೊಟ್ಟಿದ್ದಾರೆ. ಕೊಟ್ಟಿರತಕ್ಕ ಸ್ಥಳದಲ್ಲಿ ಎಷ್ಟು ವರ್ಷಗಳಲ್ಲಿ ಕಟ್ಟಿದ ಕಟ್ಟಬೇಕೆಂದು ನಿಬಂಧನೆ ಹಾಕಿದ್ದೀರಿ ? ನಿಬಂಧನೆ ಪ್ರಕಾರ ಕಟ್ಟದೇ ಹೋದರೆ ನಿವೇಶನವನ್ನು ವಾಪಸ್ ತೆಗೆದುಕೊಳ್ಳುತ್ತೀರಾ ? ನೀವು ಹೇಳಿರುವ ನಿಬಂಧನೆ ಪ್ರಕಾರ ಎಷ್ಟು ಜನ ಕಟ್ಟಡಗಳನ್ನು ಕಟ್ಟಿಲ್ಲ ? ಎಷ್ಟು ಜನರಿಗೆ ನೋಟೀಸ್ ಸರ್ವ್ ಆಗಿದೆ. ಯಾರು ಜಮೀನನ್ನು ಟ್ರಸ್ಟ್ ಮೂಲಕ ಪಡೆದಿದ್ದಾರೆ ಅವರು ತಪ್ಪು ಆದಾಯಕ್ಕೋಸ್ಕರ ಅವರ ಜಮೀನನ್ನು ಸರ್ಲೀಸ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇಲ್ಲದಿದ್ದರೆ ಸರ್ವೆ ಮಾಡಿಸಿ ಶೀಘ್ರ ಕ್ರಮವನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೀರಾ ? ನನ್ನ ಪ್ರಶ್ನೆ ಏನೆಂದರೆ, ೧೦ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ಕೊಟ್ಟಿದ್ದೀವೆಂದು ಹೇಳಿದ್ದಾರೆ. ಗುತ್ತಿಗೆ ಆಧಾರದ ಮೇಲೆ ಈ ೧೦ ಸಂಸ್ಥೆಗಳಿಗೆ ಜಮೀನನ್ನು ಕೊಟ್ಟಿದ್ದೀರಿ. ಆದೇ ರೀತಿ ೪೫ ಸಂಸ್ಥೆಗಳಿಗೆ ಕ್ರಯದ ಆಧಾರದ ಮೇಲೆ ಜಮೀನನ್ನು ಕೊಟ್ಟಿದ್ದೀರಿ. ಈ ೧೦ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ಏನು ಕೊಟ್ಟಿದ್ದೀರಿ ? ಗುತ್ತಿಗೆ ಅವಧಿ ಎಷ್ಟು? ಗುತ್ತಿಗೆ ದರ ವರ್ಷಕ್ಕೆ ಎಷ್ಟು? ಯಾವ ಪರತ್ತನ್ನು ಹಾಕಿದ್ದೀರಿ. ಗುತ್ತಿಗೆ ದರ ವರ್ಷಕ್ಕೆ ಎಷ್ಟು ? ಯಾವ ಪರತ್ತನ್ನು ಹಾಕಿದ್ದೀರಿ. ಎಲ್ಲರಿಗೂ ಒಂದೇ ಪರತ್ತನ್ನು ಹಾಕಿದ್ದೀರಾ ? ಅಥವಾ ಬೇರೆ ಬೇರೆ ಸಂಸ್ಥೆಗಳಿಗೆ ಬೇರೆ ಬೇರೆ ರೀತಿಯ ಪರತ್ತುಗಳನ್ನು ಹಾಕಿದ್ದೀರಾ?

ಶ್ರೀ ಎಂ. ಚಂದ್ರಶೇಖರ್,— ಮಾನ್ಯ ಸದಸ್ಯರು ಒಟ್ಟು ೫೬ ಪ್ರಶ್ನೆಗಳ ಬಗ್ಗೆ ಪೂರ್ಣವಾದ ಮಾಹಿತಿಯನ್ನು ಕೇಳುತ್ತಿದ್ದಾರೆ. ಅದರ ವಿವರ ಸಭ್ಯದಲ್ಲಿ ನನ್ನಲ್ಲಿಲ್ಲ ನಂತರ ಮಾನ್ಯ ಸದಸ್ಯರಿಗೆ ಅವುಗಳನ್ನು ಒದಗಿಸಿಕೊಡುತ್ತೇನೆ. ಯಾವುದೇ ಒಂದು ನಿವೇಶನವಾಗಲಿ, ಜಮೀನನ್ನಾಗಲಿ ಗುತ್ತಿಗೆ ಆಧಾರದ ಮೇಲೆ ಕೊಡುವಾಗ ಕೆಲವು ನಿಬಂಧನೆಗಳು ಇರುತ್ತವೆ, ಇಷ್ಟು ವರ್ಷಗಳಲ್ಲಿ ಪ್ರಾರಂಭ ಮಾಡಬೇಕು, ಮತ್ತು ಆ ಅವಧಿಯಲ್ಲಿ ಮುಗಿಸಬೇಕು ಅಂತ ಇರುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅನೇಕ ಸಂದರ್ಭಗಳಲ್ಲಿ ಬಹಳಷ್ಟು ಕಡೆ ನಾನೇ ನೋಡಿದಾಗ ನಿಗದಿಪಡಿಸಿದಂತಹ ಅವಧಿಯಲ್ಲಿ ಕಟ್ಟಡ ಪ್ರಾರಂಭ ಮಾಡಿರುವುದಿಲ್ಲ. ಇದು ಕೇವಲ ಖಾಸಗಿಯವರು ತೆಗೆದುಕೊಂಡಿರುವಂತಹ ಪ್ರಕರಣದಲ್ಲಿ ಅಷ್ಟೇ ಅಲ್ಲ. ಸರ್ಕಾರದ ಸಂಸ್ಥೆಗಳವರು ಹಾಗೂ ಬೇರೆ ಬೇರೆ ದತ್ತಿ ಸಂಸ್ಥೆಗಳವರೂ ಕೂಡ ನಿಗದಿಪಡಿಸಿದ ಅವಧಿಯೊಳಗೆ ಕಟ್ಟಡಗಳನ್ನು ಪ್ರಾರಂಭ ಮಾಡಿಲ್ಲದಿರುವುದು ಕಂಡು ಬಂದಿರುತ್ತದೆ. ಅದರ ಮಾಹಿತಿಯನ್ನೂ ಕೂಡ ನಂತರ ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

ಶ್ರೀ ವೇದಾಂತ ಹೆಬ್ಬಿಗೆ.— ನನ್ನ ಪ್ರಶ್ನೆಯ ಮೂಲ ಉದ್ದೇಶ ಇಷ್ಟೇ, ೮-೧೦ ಜನ ಸೇರಿ ಕೊಂಡು ಒಂದು ಟ್ರಸ್ಟ್ ಅನ್ನು ಮಾಡಿಕೊಂಡು ನಿವೇಶನಕ್ಕಾಗಿ ಅರ್ಜಿ ಹಾಕುತ್ತಾರೆ. ಈ ರೀತಿ ೮-೧೦ ಜನ ಸೇರಿಕೊಂಡು ನಿವೇಶನವನ್ನೂ ಕೂಡ ಪಡೆದುಕೊಳ್ಳುತ್ತಾರೆ. ಅವರಿಗೆ ನಿವೇಶನವನ್ನು ಕೊಡುವುದಕ್ಕಿಂತ ಮುಂಚಿತವಾಗಿ ಆ ಟ್ರಸ್ಟ್‌ನ ಇತಿಹಾಸ ಏನು ಅದರ ಹಿನ್ನೆಲೆ ಏನು ಎಂಬುದನ್ನು ನೋಡಬೇಕಾಗಿತ್ತದೆ. ಉದಾಹರಣೆಗಾಗಿ ಹೇಳುವುದಾದರೆ, ಧರ್ಮಪ್ಪನವರ ಧರ್ಮ ಛತ್ರ ಅಂತ ಇದೆ. ಅದಕ್ಕೆ ಒಂದು ದಿವಸಕ್ಕೆ ೩ ಸಾವಿರ ರೂಪಾಯಿಗಳ ಬಾಡಿಗೆ. ಈ ರೀತಿಯಾಗಿ ಬಡವರನ್ನು ಶೋಷಣೆ ಮಾಡತಕ್ಕ ವ್ಯವಸ್ಥೆ ಏನು ಇದೆ, ಈ ವ್ಯವಸ್ಥೆಯನ್ನು ನಿಲ್ಲಿಸುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ? ಈ ರೀತಿ ಏನಾದರೂ ಆಗಿದ್ದರೆ, ಟ್ರಸ್ಟ್ ಬೋರ್ಡಿನ ಬಗ್ಗೆ ಪೂರ್ಣವಾದ ತನಿಖೆಯನ್ನು ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.— ಈ ಹಿಂದೆ ಏನು ಕ್ರಮ ಅನುಸರಿಸಿ ಮಾಡಿದ್ದಾರೆಂಬುದು ನನ್ನ ಗಮನಕ್ಕೆ ಬಂದಿಲ್ಲ. ಆದರೆ ಈಗ ಇಂತಹ ವಿಚಾರದಲ್ಲಿ ಯಾವ ರೀತಿಯನ್ನು ಅನುಸರಿಸಲಾಗುತ್ತಿದೆ ಎಂಬುದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಈಗ ಹೊಸದಾಗಿ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆಂದರೆ, ಇದಕ್ಕಾಗಿ ಪರಿಶೀಲನೆ ಮಾಡುವುದಕ್ಕಾಗಿ ೩ ಜನರ ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯವರು, ಇಂತಹ ಸಂಸ್ಥೆಗಳ ಬಯೋ-ಡೇಟಾವನ್ನು ತೆಗೆದುಕೊಂಡು, ನಿಜವಾದ ಉದ್ದೇಶವನ್ನು ಸಾಧಿಸುವುದಕ್ಕೋಸ್ಕರವಾಗಿ ಜಮೀನನ್ನು ಕೇಳುತ್ತಿದ್ದಾರೆಯೇ ಎಂಬುದನ್ನು ಹೋಗಿ ಪರಿಶೀಲನೆ ಮಾಡಿಕೊಂಡು ಬರಬೇಕು, ಆದರ ಜೊತೆಗೆ ಅವರು ಶಿಫಾರಸ್ಸು ಮಾಡಬೇಕು ಎನ್ನುವ

ಉದ್ದೇಶದಿಂದ ಜಿಲ್ಲಾಧಿಕಾರಿಗಳು, ಮತ್ತು ಇದುವರೆವಿಗೂ ಇದ್ದಂತಹ ನಗರಾಭಿವೃದ್ಧಿ ಮಂಡಲ ಮತ್ತು ಯೋಜನಾಪ್ರಾಧಿಕಾರದ ಅಧಿಕಾರಿಗಳು ಸೇರಿ, ಪರಿಶೀಲನೆ ಮಾಡಿ ಕಳುಹಿಸಬೇಕೆಂದು ಮಾಡಿದ್ದೇವೆ. ಆದರೆ ಹಿಂದೆ ಏನಾದರೂ ನಿಯಮಕ್ಕೆ ವಿರುದ್ಧವಾಗಿ ಏನಾದರೂ ಆಗಿದ್ದರೆ ಅದನ್ನು ಪೂರ್ಣವಾಗಿ ತನಿಖೆ ಮಾಡಿಸುತ್ತೇನೆ.

ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯಿತಿಗಳಿಗೆ ಸರಕಾರದಿಂದ ಬಿಡುಗಡೆಮಾಡಿದ ಹಣ

೧೭೫೬. ಶ್ರೀ ಆರ್.ರಾಮಯ್ಯ (ಹಿರಿಯೂರು).—ಪ್ರಾಮೀಣ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್, ವಕ್ಫ್ ಹಾಗೂ ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮ ನೇ ಸಾಲಿಗೆ ರಾಜ್ಯ ಸರ್ಕಾರ ತನ್ನ ಬಜೆಟ್‌ನಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳಿಗೆ ಬಿಡುಗಡೆ ಮಾಡಿರುವ ಹಣವೆಷ್ಟು ? ಇದು ಪೂರ್ಣವಾಗಿ ಬಿಡುಗಡೆಯಾಗಿದೆಯೇ ? ಜಿಲ್ಲಾವಾರು ವಿವರ ನೀಡುವುದು.

ಆ) ಚಿತ್ರದುರ್ಗ ಜಿಲ್ಲಾ ಪರಿಷತ್‌ಗೆ ಬರಬೇಕಾಗಿದ್ದ ೪೦ ಕೋಟಿ ರೂಗಳಲ್ಲಿ ಕೇವಲ ೨೮ ಕೋಟಿ ರೂ. ಬಿಡುಗಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಸದರಿ ಹಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ವಿಶೇಷ ಜಾತಿಯಾಗಿರುವ ಹಣವೆಷ್ಟು ಮತ್ತು ಇದರ ಪೂರ್ಣ ಉಪಯೋಗವಾಗಿದೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).--

ಅ) ಜಿಲ್ಲಾ ಪರಿಷತ್ತುಗಳಿಗೆ ಬಿಡುಗಡೆ ಮಾಡಿದ ಹಣದ ವಿವರಣೆಯನ್ನು ಲಗತ್ತಿಸಿದೆ. ಯಾವುದೇ ಹಣವನ್ನು ಮಂಡಲ ಪಂಚಾಯತಿಗಳಿಗೆ ಸರ್ಕಾರದಿಂದ ನೇರವಾಗಿ ಬಿಡುಗಡೆ ಮಾಡುವುದಿಲ್ಲ.

ಆ) ೧೯೮೭-೮೮ ನೇ ಸಾಲಿಗಾಗಿ ಒಟ್ಟಾರೆ ೪೪.೫೯ ಕೋಟಿ ರೂ. ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ೧೯೮೭-೮೮ ನೇ ಸಾಲಿಗಾಗಿ ೩೧೦ ಲಕ್ಷ ರೂಪಾಯಿಗಳನ್ನು ವಿಂಗಡಿಸಲಾಗಿತ್ತು. ಇದರಲ್ಲಿ ೨೮೯-೦೨ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಉಳಿದ ಹಣವನ್ನು ಈ ಸಾಲಿನಲ್ಲಿ ಖರ್ಚು ಮಾಡಲಾಗುವುದು.